ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಆರ್‌ಎಸ್‌ಆರ್/ಎಕ್ಸ್‌ಎಂಸಿ/92/2017-18 ದಿನಾಂಕ:3 -11-2017

**ಸುತ್ತೋಲೆ ಸಂಖ್ಯೆ:- 265**

ವಿಷಯ:- ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 18(4) ರಡಿ ವಯೋ ನಿವೃತ್ತಿ ಹೊಂದಿದ ನೌಕರರು ಸಹಕಾರ ಸಂಘಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 123 ಸಿಎಲ್‌ಎಂ 2016, ದಿನಾಂಕ: 29-7-2017.

---

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಣಿಗೊಂಡ ರಾಜ್ಯದಲ್ಲಿ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವುದು ಅಪೇಕ್ಷಣೀಯ.

ಅದರಂತೆ, ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಯೋ ನಿವೃತ್ತಿ ವಯಸ್ಸು, ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 18(4) ರ ಪ್ರಕಾರ 60 ವರ್ಷ ಆಗಿದೆ. ಅಂದರೆ, ಯಾವುದೇ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು 60 ವರ್ಷ ವಯಸ್ಸು ಮೀರಿದಲ್ಲಿ ವಯೋನಿವೃತ್ತಿ ಹೊಂದಬೇಕಾಗುತ್ತದೆ.

ಆದರೆ, ಕೆಲವು ಸಹಕಾರ ಸಂಘ ಸಂಸ್ಥೆಗಳು ಇವುಗಳನ್ನು ಪಾಲಿಸದೇ 60 ವರ್ಷ ವಯಸ್ಸು ಮೀರಿ ವಯೋ ನಿವೃತ್ತಿ ನಂತರವೂ ಸೇವೆ ಮುಂದುವರೆಸಿರುವ ಪ್ರಕರಣಗಳು ಈ ಕಛೇರಿಯ ಗಮನಕ್ಕೆ ಬಂದಿದೆ.

ಯಾವುದೇ ಸಹಕಾರ ಸಂಘಗಳಲ್ಲಿ ವಯೋ ನಿವೃತ್ತಿ ನೌಕರರನ್ನು ನೇಮಿಸಿಕೊಂಡಲ್ಲಿ ತಕ್ಷಣ ಅಂತಹ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆಗೊಳಿಸಿ ನಿಯಮ ಪಾಲಿಸತಕ್ಕದ್ದು. ತಪ್ಪಿದಲ್ಲಿ ಆ ರೀತಿ ನೇಮಕಾತಿ ಮಾಡಿಕೊಂಡ ಪದಾಧಿಕಾರಿ/ಆಡಳಿತ ಮಂಡಲಿಯ ಸದಸ್ಯರ ವಿರುದ್ಧ ಕಾನೂನು ಕ್ರಮ ಜರುಗಿಸುವುದಲ್ಲದೆ

ನಿವೃತ್ತಿಗೊಂಡ ಸಿಬ್ಬಂದಿಗೆ ಪಾವತಿಯಾದ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯ ಪದಾಧಿಕಾರಿಗಳು/ಆಡಳಿತ ಮಂಡಲಿಯ ಸದಸ್ಯರಿಂದ ವಸೂಲಿ ಮಾಡಲಾಗುವುದು.

ಈ ಮೇಲಿನ ಸೂಚನೆಗಳನ್ನು ಯಥಾವತ್ತಾಗಿ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಗೆ,

1. ಕೇಂದ್ರ ಕಛೇರಿಯ ಎಲ್ಲಾ ಕಾರ್ಯನಿರ್ವಹಣಾ ಮುಖ್ಯಸ್ಥರುಗಳು
2. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
3. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು
4. ಎಲ್ಲಾ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
5. ಎಲ್ಲಾ ಸಹಕಾರ ಅಭಿವೃದ್ಧಿ ಅಧಿಕಾರಿಗಳು.

ಇವರಿಗೆ ಕಳುಹಿಸುತ್ತಾ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸಹಕಾರ ಸಂಘಗಳಿಗೆ ಕಳುಹಿಸಿ ಸುತ್ತೋಲೆಯ ಅಂಶಗಳನ್ನು ಪಾಲಿಸಿ ವರದಿ ಸಲ್ಲಿಸಲು ಸೂಚಿಸಿದೆ

6. ಸಹಕಾರ ಇಲಾಖಾ ಜಾಲತಾಣಕ್ಕೆ